ಮುಜರಾಯಿ ದೇವಸ್ಥಾನಗಳು

1219(2328); ಮಾನ್ಯ ಶ್ರೀ ಕೃಷ್ಣಾರೆಡ್ಡಿ ಎಂ. (ಚಿಂತಾಮಣಿ)

ಅ) ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿ ತಾಲ್ಲೂಕಿನಲ್ಲಿರುವ ಕರ್ನಾಟಕ ಧಾರ್ಮಿಕ ಧರ್ಮಾದಾಯ ದತ್ತಿ ಇಲಾಖೆಯಡಿಯಲ್ಲಿರುವ (ಮುಜರಾಯಿ ಇಲಾಖೆ) ನಿವೇಶನ/ ಜಮೀನು ಕಟ್ಟಡ ಹಾಗೂ ಇತರೆ ಆಸ್ತಿಗಳ ಸಂಪೂರ್ಣ ವಿವರವನ್ನು ನೀಡುವುದು (ಸರ್ವೆ ನಂಬರು/ ನಗರ ಸಭೆಯ ಖಾತೆ ನಂ./ ಪಂಚಾಯ್ತಿ ನಂ.ಗಳ ಸಮೇತ ಪೂರ್ಣ ವಿವರ ನೀಡುವುದು);

ಆ) ತಾಲ್ಲೂಕಿನಲ್ಲಿರುವ ಮುಜರಾಯಿ ಇಲಾಖೆಯ ಧರ್ಮಛತ್ರಗಳ ಸಂಖ್ಯೆ ಎಷ್ಟು; ಅವು ಯಾವುವು (ಸರ್ವೆ ನಂ/ನಗರ ಸಭೆಯ ಖಾತೆ ನಂ/ಪಂಚಾಯ್ತಿ ಖಾತೆ ನಂ ಗಳ ಸಮೇತ ಪೂರ್ಣ ವಿವರ ನೀಡುವುದು);

ಇ) ಮುಜರಾಯಿ ಇಲಾಖೆಯ ಧರ್ಮ ಛತ್ರಗಳ ಸರ್ವೆ ನಂ. ಜಮೀನುಗಳು ಮತ್ತು ಇತರೆ ಆಸ್ತಿಗಳನ್ನು ಯಾರಿಗಾದರೂ (ಗೇಣಿಗೆದಾರರಿಗೆ) ಮಂಜೂರು ಮಾಡಲಾಗಿದೆಯೇ (ಪೂರ್ಣ ವಿವರ ನೀಡುವುದು);

ಈ) ಮುಜರಾಯಿ ಇಲಾಖೆಯ ಆಸ್ತಿಗಳನ್ನು ಗೇಣಿದಾರರು ಖಾಸಗಿಯವರಿಗೆ ಮಾರಾಟ ಅಥವಾ ಗುತ್ತಿಗೆ ನೀಡಬಹುದೆ (ವಿವರ ನೀಡುವುದು);

ಉ) ಮುಜರಾಯಿ ಇಲಾಖೆ ಆಸ್ತಿಗಳನ್ನು ಗೇಣಿದಾರರು ಖಾಸಗಿಯವರಿಗೆ ಮಾರಾಟ ಅಥವಾ ಗುತ್ತಿಗೆ ನೀಡಿರುವ ಪ್ರಕರಣಗಳು ಕಂಡು ಬಂದಲ್ಲಿ ಯಾವ ನಿಯಮಗಳ ಅಡಿಯಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುವುದು (ವಿವರ ಮತ್ತು ಪ್ರತಿಯನ್ನು ನೀಡುವುದು)?

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನಾ ಮತ್ತು ಮುಜರಾಯಿ ಸಚಿವರು)

ಅ) ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕಿನಲ್ಲಿ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯಲ್ಲಿ ಒಟ್ಟು 284 ಸಂಸ್ಥೆಗಳಿದ್ದು, ಇವುಗಳಲ್ಲಿ 226 ಸಂಸ್ಥೆಗಳು ಆಸ್ತಿಯನ್ನು ಹೊಂದಿರುತ್ತದೆ.

ದೇವಾಲಯವಾರು ಆಸ್ತಿಯ ವಿವರ ಹೆಚ್ಚಿನ ಪ್ರಮಾಣದಲ್ಲಿದ್ದು, ಸಂಬಂಧಪಟ್ಟ ಶಾಸಕರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು.

ಆ) ಚಿಂತಾಮಣಿ ತಾಲ್ಲೂಕಿನಲ್ಲಿರುವ ಮುಜರಾಯಿ ಇಲಾಖೆಯ ಧರ್ಮಛತ್ರಗಳ ಸಂಖ್ಯೆ:4. ವಿವರ ಕೆಳಕಂಡಂತಿದೆ.

ಕ್ರ. ಸಂ	ಸಂಸ್ಥೆಯ ಹೆಸರು	ಖಾತೆ ನಂ
1	ದಾದಾರಾವ್ ಛತ್ರ ಚಿಂತಾಮಣಿ ನಗರ	3259/3057
2	ಕಾರಪಾಕಲು ಛತ್ರ ಚಿಂತಾಮಣಿ ನಗರ	920/839 ರಿಂದ 933/852 ವರೆಗೆ
3	ಅನ್ನಛತ್ರ, ಕೋನಂಪಲ್ಲಿ	123/6
4	ಉಮಾಮಹೇಶ್ವರಿ ಮತ್ತು ವೆಂಕಟರಮಣಸ್ವಾಮಿ ದೇವಾಲಯ, ಚಿಂತಾಮಣಿ ನಗರ	22/22 ರಿಂದ 37/37 ರವರೆಗೆ

ಇ) ಇಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ

ಉ) ಪ್ರಶ್ನೆ ಉದ್ಭವಿಸುವುದಿಲ್ಲ.